5596(6243) : ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರುಗಳಿಗೆ ಕೃಷಿ ಇಲಾಖೆಯಿಂದ ಯಾವ ಯಾವ ಸವಲತ್ತುಗಳನ್ನು ನೀಡಲಾಗುತ್ತಿದೆ;

ಆ) ಕ್ಷೇತ್ರದ ರೈತರಿಗೆ ಕಳೆದ ಮೂರು ವರ್ಷಗಳಿಂದ ಬರಬೇಕಾದ ಕೃಷಿ ವಿಮೆಯ ಮೊತ್ತವೆಷ್ಟು; ಬಾಕಿಯನ್ನು ಕೊಡಿಸಲು ಸರ್ಕಾರದ ಕ್ರಮವೇನು;

ಇ) 10 ರಿಂದ 15 ಎಕರೆಗಳಷ್ಟು ಜಮೀನು ಹೊಂದಿರುವ ರೈತರುಗಳು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಇವರಿಗೂ ಸಹ ಕೃಷಿ ಇಲಾಖೆಯಿಂದ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಬಸವಕಲ್ಯಾಣ) (ಕೃಷಿ ಸಚಿವರು):

ಅ) ಪ್ರಸಕ್ತ ಸಾಲಿನ ಎಲ್ಲಾ ಯೋಜನೆಗಳಡಿ ಸಣ್ಣ ಮತ್ತು ಅತಿಸಣ್ಣ ರೈತರು ಸೇರಿದಂತೆ ಎಲ್ಲಾ ವರ್ಗಗಳ ರೈತರಿಗೆ ಸೌಲತ್ತುಗಳನ್ನು ನೀಡಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಅಂದರೆ, 2002–03ನೇ ಸಾಲಿನಿಂದ 2004–05ನೇ ಸಾಲಿನ ಅಂತ್ಯದವರೆಗೆ ಅಧಿಸೂಚಿಸಿದ ಪ್ರದೇಶಗಳ ಅಧಿಸೂಚಿತ ಬೆಳೆಗಳಿಗೆ 66938 ರೈತರು ರೂ. 94.01 ಲಕ್ಷಗಳನ್ನು ವಿಮಾ ಕಂತಾಗಿ ಪಾವತಿಸಿ ಯೋಜನೆಯಲ್ಲಿ ಪಾಲ್ಗೊಂಡಿರುತ್ತಾರೆ. 2002–03 ಹಾಗೂ 2003–04ನೇ ಸಾಲಿನಲ್ಲಿ ಒಟ್ಟು 8136 ರೈತರು ರೂ. 43.97 ಲಕ್ಷಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ಪಡೆದಿರುತ್ತಾರೆ. ವರ್ಷಾವಾರು ವಿವರಗಳು ಈ ಕೆಳಕಂಡಂತಿವೆ.

ವರ್ಷ	ಪಾಲ್ಗೊಂಡ ರೈತರ ಸಂಖ್ಯೆ	ವಿಮಾ ಕಂತು (ಲಕ್ಷ ರೂ.)	ಫಲಾನುಭವಿ ರೈತರ ಸಂಖ್ಯೆ	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ.)
2002–03	24321	37.32	818	1.27
2003–04	19177	24.40	7318	42.70
2004–05	23440	32.29	*	*
ಒಟ್ಟು	66938	94.01	8130	43.97

*2004ರ ಮುಂಗಾರು ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿಮಾ ಸಂಸ್ಥೆಯು ಲೆಕ್ಕ ಹಾಕುತ್ತಿದ್ದು, ಶೀಘ್ರದಲ್ಲಿ ಇತ್ಯರ್ಥಪಡಿಸಲಾಗುವುದು 2004–05ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಕಂಡು ಹಿಡಿಯಲಾದ ಇಳುವರಿ ಮಾಹಿತಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಕ್ರೋಢಿಕರಿಸುತ್ತಿದೆ. ಈ ಮಾಹಿತಿ ವಿಮಾ ಸಂಸ್ಥೆಗೆ ಒದಗಿಸಿದ ನಂತರ ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಿ ರೈತರಿಗೆ ಇತ್ಯರ್ಥಪಡಿಸುತ್ತದೆ.

ಇ) ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮದ ಹೊರತಾಗಿ ಉಳಿದ ಎಲ್ಲಾ ಕಾರ್ಯಕ್ರಮಗಳಡಿಯಲ್ಲಿ ಈಗಾಗಲೇ ಎಲ್ಲಾ ವರ್ಗಗಳ ರೈತರಿಗೂ ಸಹ ಕೃಷಿ ಇಲಾಖೆಯಿಂದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆಯಾದ್ದರಿಂದ ಪುನಃ ಮೂರು ಕ್ರಮದ ಅಗತ್ಯವಿಲ್ಲ.

ಅನುಬಂಧ

ಬಸವಕಲ್ಯಾಣ ಕ್ಷೇತ್ರದಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಮತ್ತು ವಿವರಗಳು

ಕ್ರ.ಸಂ.	ವಿವರ / ಯೋಜನೆ	ಸೌಲಭ್ಯಗಳು / ಘಟಕಗಳು
1.	2005–06ನೇ ಸಾಲಿನ ವರ್ಕ್‌ಪ್ಲಾನ್ ಯೋಜನೆ ಅಡಿ ಬೆಳೆ ಉತ್ಪಾದನಾ ನಿರ್ವಹಣಾ ಯೋಜನೆ	ಅ) ಹೈಬ್ರಿಡ್ ಭತ್ತದ ಪ್ರಾತ್ಯಕ್ಷಿಕೆಗಳು– ರೂ. 4000/ಹೆ. ಆ) ಸುವಾಸನೆ ಭತ್ತದ ಪ್ರಾತ್ಯಕ್ಷಿಕೆಗಳು– ರೂ. 2500/ಹೆ. ಇ) ಶ್ರೀ ಪದ್ಧತಿ ಭತ್ತದ ಪ್ರಾತ್ಯಕ್ಷಿಕೆಗಳು– ರೂ. 5000/ಹೆ. ಈ) ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆಗಳು– ರೂ. 15000/ಹೆ. ಉ) ಮಿಶ್ರಬೆಳೆ ಪದ್ಧತಿ ಪ್ರಾತ್ಯಕ್ಷಿಕೆಗಳು– ರೂ. 2000/ಹೆ. ಊ) ಬೆಳೆ ವೈವಿಧ್ಯತೆ ಪ್ರಾತ್ಯಕ್ಷಿಕೆಗಳು– ರೂ. 2500/ಹೆ ಋ) ಹಿಳುವರಿ ಸುಧಾರಣಾ ಪ್ರಾತ್ಯಕ್ಷಿಕೆಗಳು– ರೂ. 2000–6250/ಹೆ.
2.	ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆ	ಅ) ಕೃಷಿ ಪರಿಕರಗಳು ರೂ. 2800/–ಹೆ. ಆ) ಧಾನ್ಯ ಸಂಗ್ರಹಣಾ ಕಣಗಳು ಶೇ. 75 ರೂ. 1000 ಗರಿಷ್ಠ ಇ) ಆಧುನಿಕ ಕೃಷಿ ಉಪಕರಣಗಳು ಶೇ. 75 ರೂ. 50000 ಗರಿಷ್ಠ ಈ) ಕೈಚಾಲಿತ ಸಸ್ಯ ಸಂರಕ್ಷಣಾ ಉತ್ಪನ್ನಗಳು ಶೇ. 75 ರೂ. 1000 ಗರಿಷ್ಠ ಉ) ಡೀಸಲ್/ಸೀಮೆಎಣ್ಣೆ ಪಂಪ್ ಸೆಟ್‌ಗಳು ಶೇ. 75 ರೂ. 10000 ಗರಿಷ್ಠ ಊ) ಪವರ್ ಟಿಲ್ಲರ್ ಶೇ. 75 ರೂ. 50000 ಗರಿಷ್ಠ ಋ) ಜಲಾಂತರ್ಗತೆ ಪಂಪ್ ಸೆಟ್‌ಗಳು ಶೇ. 75 ರೂ. 25000 ಗರಿಷ್ಠ

ಕ್ರ.ಸಂ.	ವಿವರ/ಯೋಜನೆ	ಸೌಲಭ್ಯಗಳು / ಘಟಕಗಳು
3.	ಸಮಗ್ರ ಎಣ್ಣೆಕಾಳು, ದ್ವಿದಳ ಧಾನ್ಯ, ಮುಸುಕಿನ ಜೋಳ, ಆಯಿಲ್ ಪಾಮ್ ಅಭಿವೃದ್ಧಿ ಯೋಜನೆ (ಐಸೋಪಾಮ್)	ಅ) ಪ್ರಮಾಣಿತ ಬಿತ್ತನೆ ಬೀಜ ಉತ್ಪಾದನೆ ರೂ. 375/ ಕ್ವಿ ರೈತರಿಗೆ ಆ) ಪ್ರಮಾಣಿತ ಬಿತ್ತನೆ ಬೀಜ ವಿತರಣೆ ಶೇ.30 ಗರಿಷ್ಠ ರೂ. 800 ಇ) ದೊಡ್ಡ ಪ್ರಮಾಣಿತ ಪ್ರಾತ್ಯಕ್ಷಿಕೆಗಳು ರೂ. 1500–4000 ಈ) ಮಿಶ್ರ ಬೆಳೆ ಪ್ರಾತ್ಯಕ್ಷಿಕೆ ರೂ. 500/ಹೆ. ಉ) ಸಮಗ್ರ ಪೀಡೆ ಪ್ರಾತ್ಯಕ್ಷಿಕೆ ರೂ. 250, ರೂ. 428, ರೂ. 500, ರೂ. 747.50, ರೂ. 1230, ರೂ. 1627.50 ಹೆ ಊ) ಸಸ್ಯ ಸಂರಕ್ಷಣಾ ಉಪಕರಣಗಳು ಶೇ. 50 ಗರಿಷ್ಠ ರೂ. 800–2000 ಋ) ಅಣುಜೀವಿ ಗೊಬ್ಬರ ಶೇ. 50 ಗರಿಷ್ಠ ರೂ. 50/ಹೆ. ೠ) ಜಿಪ್ಸಂ ಪೈರೈಟ್ಸ್ ಶೇ. 50 ರೂ. 750/–ಹೆ ಎ) ತುಂತುರು ನೀರಾವರಿ ಉಪಕರಣ ಶೇ. 33–50 ರೂ 10000–15000/ ಹೆ./ಸೆಟ್ ಏ) ಸುಧಾರಿತ ಕೃಷಿ ಉಪಕರಣ ಶೇ. 50 ರೂ. 2000–10000 ಐ) ಅಧ್ಯಯನ ಪ್ರವಾಸ ರೂ. 50000–50 ಜನರೈತರಿಗೆ 2 ದಿವಸಗಳು ಒ) ರೈತರ ತರಬೇತಿ ರೂ. 15000.50 ಜನ ರೈತರಿಗೆ 1 ದಿವಸ ಓ) ಸಸ್ಯ ಸಂರಕ್ಷಣಾ ರಾಸಾಯನಿಕ ಕೀಟನಾಶಕಗಳು ಶೇ. 50 ರೂ. 500/ಹೆ.
4.	ವರ್ಕ್ ಪ್ಲಾನ್ ಅಡಿ ಕಬ್ಬು ಅಭಿವೃದ್ಧಿ ಯೋಜನೆ	ಅ) ಕಬ್ಬಿನ ತುಂಡುಗಳ ವಿತರಣೆ ಶೇ. 25 ರೂ. 2000/ಹೆ. ಆ) ದೊಡ್ಡ ಪ್ರಮಾಣದ ಪ್ರಾತ್ಯಕ್ಷಿತೆ ರೂ. 2500/ಹೆ.

ಕ್ರ.ಸಂ.	ವಿವರ/ಯೋಜನೆ	ಸೌಲಭ್ಯಗಳು/ಘಟಕಗಳು
		ಇ) ಜೈವಿಕ ಘಟಕಗಳ ವಿತರಣೆ ಶೇ. 25 ರೂ. 500/ಹೆ.
		ಈ) ಒಂದು ಕಣ್ಣಿನ ಬೀಜನ ತುಂಡು ಪ್ರಾತ್ಯಕ್ಷಿತೆ ರೂ. 1250/ಎಕರೆ
5.	ಕೃಷಿ ಪ್ರಶಸ್ತಿ	ಬೆಳೆ ಉತ್ಪಾದಕತೆ ಹೆಚ್ಚಿಸಲು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಬೆಳೆ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ನೀಡುವುದು. ರಾಜ್ಯಮಟ್ಟ : ರೂ. 30,000 ರೂ. 15,000 ಮತ್ತು ರೂ. 10000 ಜಿಲ್ಲಾಮಟ್ಟ : ರೂ. 15,000 ರೂ. 10000 ಮತ್ತು ರೂ. 5000 ತಾಲ್ಲೂಕುಮಟ್ಟ : ರೂ. 10000 ರೂ. 5000 ಮತ್ತು ರೂ. 3000
6.	ವೈಟಪ್ (ಯೋಜನೆ)	ಕಾರ್ಯಕ್ರಮಕ್ಕೆ ಸರ್ಕಾರದ ಅನುಮೋದನೆ ಬರಬೇಕಿದೆ.
7.	ಹನಿ ನೀರಾವರಿ ಯೋಜನೆ (ಲಘು ನೀರಾವರಿ ಕಾರ್ಯಕ್ರಮ) (ಯೋಜನೆ)	ಅ) ತುಂತುರು ನೀರಾವರಿ ಶೇ. 50, ಗರಿಷ್ಠ ರೂ. 15,000/ಹೆ.
		ಆ) ಹನಿ ನೀರಾವರಿ ಶೇ, 50 ಗರಿಷ್ಠ ರೂ. 22,500/ಹೆ.
		ಇ) ರೇನ್‌ಗನ್ ಶೇ. 50, ಗರಿಷ್ಠ ರೂ. 12,000/ಹೆ.
8.	ಕೃಷಿ ಯಾಂತ್ರೀಕರಣ (ಯೋಜನೆ) ವರ್ಕ್ ಪ್ಲಾನ್ ಮತ್ತು ಕೃಷಿ ಯಂತ್ರೋಪಕರಣಗಳು (ಯೋಜನೆ)	ಅ) ಪವರ್ ಟಿಲ್ಲರ್ ಶೇ. 50, ಗರಿಷ್ಠ ರೂ. 49,500
		ಆ) ಟ್ರ್ಯಾಕ್ಟರ್ ಶೇ. 50, ಗರಿಷ್ಠ ರೂ. 60,000
		ಇ) ಹೈಟೆಕ್ ಯಂತ್ರೋಪಕರಣಗಳು ಶೇ. 50, ಗರಿಷ್ಠ ರೂ. 2,000–60000
9.	ಹೊಸ ಮಣ್ಣು ಆರೋಗ್ಯ ಚೀಟಿ ಆಧಾರಿತ ಗ್ರಾಮವಾರು ಬೆಳೆ ಉತ್ಪಾದನಾ ಯೋಜನೆ	ಮಣ್ಣು ಮಾದರಿ ವಿಶ್ಲೇಷಣಾ ವಿವರಗಳನ್ನು ರೈತರಿಗೆ ಒದಗಿಸುವುದು.
10.	ಮಣ್ಣು ಪರೀಕ್ಷೆ ಕಾರ್ಯಕ್ರಮ	ಮಣ್ಣು ಮಾದರಿ ವಿಶ್ಲೇಷಣಾ ವಿವರಗಳನ್ನು ರೈತರಿಗೆ ಒದಗಿಸುವುದು.

ಕ್ರ.ಸಂ.	ವಿವರ/ಯೋಜನೆ	ಸೌಲಭ್ಯಗಳು/ಘಟಕಗಳು
11.	ಪ್ರಮಾಣಿತ/ಗುಣ ಮಟ್ಟದ ಬೀಜಗಳ ವಿತರಣಾ ಕಾರ್ಯಕ್ರಮ	ರೈತರಿಗೆ ಗುಣ ಮಟ್ಟದ ಮತ್ತು ಪ್ರಮಾಣಿತ ಬಿತ್ತನೆ ಬೀಜಗಳ ವಿತರಣೆಗೆ ವ್ಯವಸ್ಥೆ
12.	ಕೃಷಿ ವಿಸ್ತೃತ ನಿರ್ವಹಣೆ ಯೋಜನೆಯಡಿ ರೈತರ ತಾಕುಗಳಲ್ಲಿ ಗುಣ ಮಟ್ಟದ ಬೀಜೋತ್ಪಾದನೆ ಕಾರ್ಯಕ್ರಮ	ರೈತರಿಗೆ ಒಂದು ಎಕರೆಗೆ ಬೇಕಾಗುವ ಬಿತ್ತನೆ ಬೀಜಗಳನ್ನು ಉಚಿತವಾಗಿ ಸರಬರಾಜು ಮಾಡಿ ಬೀಜೋತ್ಪಾದನೆ ನಂತರ ಬರುವ ಬೀಜಗಳನ್ನು ರೈತರಿಂದ ರೈತರಿಗೆ ವಿತರಿಸುವುದು.
13.	ರಸ ಗೊಬ್ಬರ ಸರಬರಾಜು ಯೋಜನೆ	ರಸಗೊಬ್ಬರಗಳ ಸರಬರಾಜು ವ್ಯವಸ್ಥೆಯಲ್ಲಿ ಗುಣಮಟ್ಟ ಮತ್ತು ಸಕಾಲಿಕತೆ ಕಾಪಾಡುವುದು.
14.	ಸಸ್ಯ ಸಂರಕ್ಷಣೆ ಯೋಜನೆ ಕಾರ್ಯಕ್ರಮಗಳು	ಅ) ಸಸ್ಯ ಸಂರಕ್ಷಣಾ ಉಪಕರಣಗಳು ಶೇ. 50 ಗರಿಷ್ಠ ರೂ.800 ಆ) ಸಸ್ಯ ಸಂರಕ್ಷಣಾ ಪೀಡೆನಾಶಕಗಳು ಶೇ. 50 ಗರಿಷ್ಠ ರೂ. 400/ಹೆ. ಇ) ಪೆಕ್ಕಾ ಕೋರಿ ನಿರ್ಮಾಣಕ್ಕೆ ಪ್ರೋತ್ಸಾಹ ಶೇ. 50 ಗರಿಷ್ಠ ರೂ. 1000 ಈ) ಸುಧಾರಿತ ಕಣಜಗಳ ವಿತರಣೆ ಶೇ. 50 ಗರಿಷ್ಠ ರೂ. 500
15.	ಸಾವಯವ ಗೊಬ್ಬರಗಳ ಯೋಜನೆ	ಅ) ಹರಳು ರೂಪದ ಗೊಬ್ಬರ ವಿತರಣೆ ಶೇ. 50 ರೂ. 2750/ಟನ್ ಆ) ಮಿಶ್ರ ಬೇಸಾಯ/ಪಶುಸಂಗೋಪನೆ ರೂ. 2,00,000/ಗ್ರಾಮ ಇ) ಮಳೆ ನೀರು ಸಂಗ್ರಹಣೆ ರೂ. 2,00,000/ಗ್ರಾಮ ಈ) ಸಾವಯವ ಕೃಷಿಯಲ್ಲಿ ತರಬೇತಿ ರೂ. 50,000/ಗ್ರಾಮ ಉ) ಕಾಂಪೋಸ್ಟ್/ಎರೆಹುಳು/ಜೈವಿಕ ಗೊಬ್ಬರ ಉತ್ಪಾದನಾ ಘಟಕ ಸ್ಥಾಪನೆ ರೂ. 1.50 ಲಕ್ಷ, ರೂ. 20.00 ಲಕ್ಷ, ರೂ. 30.00 ಲಕ್ಷ ಊ) ಹಸಿರೆಲೆ ಗೊಬ್ಬರ ಬೀಜ ವಿತರಣೆ ಶೇ. 50 ಗರಿಷ್ಠ ರೂ. 10,000/ಗ್ರಾಮ

ಕ್ರ.ಸಂ.	ವಿವರ/ಯೋಜನೆ		ಸೌಲಭ್ಯಗಳು / ಘಟಕಗಳು
		ಋ)	ಅರಣ್ಯ ಸಸಿಗಳು ಶೇ. 50 ರೂ. 400X25 ಎಕರೆ
		ಋೂ)	ಎರೆಹುಳು/ಕಾಂಪೋಸ್ಟ್ ಗೊಬ್ಬರ ತಯಾರಿಕಾ ಘಟಕ ರೂ. 500X25 ಘಟಕ (ಗರಿಷ್ಠ)
16.	ಸಾವಯವ ಗೊಬ್ಬರಗಳ ಯೋಜನೆ (ರಾಜ್ಯ ವಲಯ)	ಅ)	ಹರಳು ರೂಪದ ಗೊಬ್ಬರ ವಿತರಣೆ ಶೇ. 50 ರೂ. 2750/ ಟನ್
17.	ಸಾವಯವ ಗೊಬ್ಬರಗಳ ಯೋಜನೆ (ಜಿಲ್ಲಾ ವಲಯ)	ಅ)	ಹರಳು ರೂಪದ ಗೊಬ್ಬರ ವಿತರಣೆ ಶೇ. 50 ರೂ. 2750/ಟನ್
		ಆ)	ಹಿರಿಲೆ ಗೊಬ್ಬರ ಬೀಜ ವಿತರಣೆ ಶೇ. 50 ಗರಿಷ್ಠ ರೂ. 10,000/ಗ್ರಾಮ
		ಇ)	ಅರಣ್ಯ ಸಸಿಗಳು ಶೇ. 50 ರೂ. 400X25 ಎಕರೆ
		ಈ)	ಅಧ್ಯಯನ ಪ್ರವಾಸ ರೂ. 20,000 (50 ಜನ ರೈತರಿಗೆ 2 ದಿವಸಗಳಿಗೆ)
18.	ಕೃಷಿ ವಿಸ್ತೃತ ನಿರ್ವಹಣೆ ಯೋಜನೆಯಡಿ ಸಾವಯವ ಕೃಷಿ ಕಾರ್ಯಕ್ರಮ (ಜಿಲ್ಲಾ ವಲಯ)	ಅ)	ಸಮಗ್ರ ಪೋಷಕಾಂಶ ನಿರ್ವಹಣೆ ಪ್ರಾತ್ಯಕ್ಷಿಕ ರೂ. 2500/ಹೆ.
		ಆ)	ಸಾವಯವ ಕೃಷಿ ಪ್ರಾತ್ಯಕ್ಷಿಕೆ ರೂ.6000/ಹೆ.
		ಇ)	ಲಘು ಪೋಷಕಾಂಶಗಳು ಶೇ. 25 ರೂ. 250/ಹೆ.
		ಈ)	ಕೃಷಿ ಸುಣ್ಣ ಶೇ. 25 ರೂ. 250/ಹೆ.
		ಉ)	ಎರೆಗೊಬ್ಬರ ಉತ್ಪಾದನೆಗೆ ಪ್ರೋತ್ಸಾಹ ಶೇ. 25 ರೂ. 1000/ಘಟಕ
		ಊ)	ಸ್ವಸಹಾಯ ಗುಂಪುಗಳಿಗೆ ನೆರವು ರೂ. 5000/ಗುಂಪು
		ಋ)	ಸಾವಯವ ಕೃಷಿಯಲ್ಲಿ ತರಬೇತಿ ರೂ. 25000(50 ಜನ ರೈತರಿಗೆ 2 ದಿವಸಗಳ ಅವಧಿ)